**ಸಾಕ್ಷಿಗೆ ದಿನಾಂಕಃ19-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. AA ವಕೀಲರಿಂದ ::**

ನನ್ನ ದಾವಾ ಎ ಸ್ವತ್ತನ್ನು ಪ್ರತಿವಾದಿ ಒತ್ತುವರಿ ಮಾಡಿರುವ ಕಾರಣ ಒತ್ತುವರಿ ಬಿಡಿಸಿಕೊಡಲು ಈ ದಾವೆಯನ್ನು ಹೂಡಿರುತ್ತೇನೆ. ನನ್ನ ಸ್ವತ್ತು ಸಹ್ಯಾದ್ರಿಪುರ ಗ್ರಾಮದ ಸರ್ವೇ ನಂಬರ್ 44/2 ರಲ್ಲಿ 2 ಎಕರೆ 12 ಗುಂಟೆ ಜಮೀನು ಆಗಿರುತ್ತದೆ. ಸರ್ವೇ ನಂಬರ್ 44 ರ ಮೂಲ ವಿಸ್ತೀರ್ಣ ನನಗೆ ಗೊತ್ತಿಲ್ಲ. ನನ್ನ ಮೃತ ಗಂಡ 2 ಎಕರೆ 17 ಗುಂಟೆ ಜಾಗವನ್ನು ದಾವಾ ಸರ್ವೇ ನಂಬರ್ ನಲ್ಲಿ ಖರೀದಿ ಮಾಡಿರುತ್ತಾರೆ. ನನ್ನ ಜಮೀನಿನಲ್ಲಿ ಅಡಿಕೆ ತೋಟ ಇರುತ್ತದೆ. ದಾವಾ ಎ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಪ್ರತಿವಾದಿಯ ಜಮೀನು, ಪಶ್ಚಿಮಕ್ಕೆ ಮಲ್ಲೇಶಪ್ಪ ರವರ ಜಮೀನು, ಉತ್ತರ – ದಕ್ಷಿಣ ಸರ್ಕಾರಿ ರಸ್ತೆ ಇರುತ್ತದೆ. ಪ್ರತಿವಾದಿ ಒತ್ತುವರಿ ಮಾಡಿರುತ್ತಾರೆ ಎಂದು ಹೇಳುತ್ತಿರುವ ದಾವಾ ಬಿ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಪ್ರತಿವಾದಿಯ ಜಮೀನು, ಪಶ್ಚಿಮಕ್ಕೆ ದಾವಾ ಎ ಸ್ವತ್ತು, ಉತ್ತರ – ದಕ್ಷಿಣ ಸರ್ಕಾರಿ ರಸ್ತೆ ಇರುತ್ತದೆ. ಸರ್ವೇ ನಂಬರ್ 44 ಮೂಲತಃ ಸೂರ್ಯನಾರಾಯಣ ದಿಕ್ಷಿತ್ ಎನ್ನುವವರಿಗೆ ಸೇರಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತಿನ ಮೂಲ ದಾಖಲೆಯನ್ನು ಈ ದಾವೆಯಲ್ಲಿ ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸರ್ವೇಯರ್ ರವರು ನನ್ನ ಅರ್ಜಿ ಆಧಾರದಲ್ಲಿ ಕೇವಲ ನನ್ನ ಜಮೀನು ಅನ್ನು ಮಾತ್ರ ಅಳತೆ ಮಾಡಿರುತ್ತಾರೆ ಸಾಕ್ಷಿಯು ಪ್ರತಿವಾದಿಯ ಜಮೀನನ್ನು ಸಹ ಅಳತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೇಯರ್ ರವರು ನನ್ನ ಜಮೀನು ಅನ್ನು ಮಾತ್ರ ಅಳತೆ ಮಾಡಿದ್ದು ಬಾಜುದಾರರ ಜಮೀನು ಅನ್ನು ಅಳತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೇಯರ್ ರವರು ಪ್ರತಿವಾದಿಗೆ ಯಾವುದೇ ನೋಟೀಸ್ ಅನ್ನು ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಸರ್ವೇಯರ್ ಶಾಮಿಲಾಗಿ ಸುಳ್ಳು ವರದಿ ತಯಾರಿಸಿ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ಪ್ರತಿವಾದಿ ನನ್ನ ಯಾವುದೇ ಸ್ವತ್ತನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನು ಅವರಿಗೆ ಸೇರಿದ್ದು ನನ್ನ ಜಮೀನು ಅನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಸುಳ್ಳು ಕತೆ ಕಟ್ಟಿ ಸುಳ್ಳು ದಾಖಲಾತಿಯ ಆಧಾರದಲ್ಲಿ ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: